

### ನಾನು ಭತ್ತದ ಕೃಷಿಯಲ್ಲಿ ವಿದ್ಯಾರ್ಥಿ!

ರಂಗುರಂಗಿನ ಬದುಕಿನಿಂದ ಮಾನಸಿಕ ವಿಕಾರ. ಅದಕ್ಕೆ ಆಕಾರ ನೀಡಲು ತಂತ್ರಜ್ಞಾನಗಳ ನೆರವು. ಈ ಜಾಲಗಳಿಗೆ ಸಿಲುಕದ ದೇವರಾಯರ ಮಾತಿನ ಮಧ್ಯೆ ಮಿನುಗಿದ ಪಂಚಿಂಗ್....

- ಕೃಷಿಕರು ಆರ್ಥಿಕ ಬೆಳೆಗಳಿಗೆ ಮಾರುಹೋಗಿ, ಭತ್ತದ ಕೃಷಿಯನ್ನು ಕಡೆಗಣಿಸಿರುವುದು ತಪ್ಪು.
- ಭಾರತವು ಕೃಷಿ ಪ್ರಧಾನವಾದ ದೇಶವೆಂದು ಹೇಳುತ್ತಾರೆ. ಅದರೆ ಇಲ್ಲಿ ಕೃಷಿಕನಿಗೆ ಬೆಲೆಯೇ ಇಲ್ಲ.
- ಹಿಂದೆ ನಾನು ಹೀಗೆ ಇದ್ದೆ ಎಂದು ಪ್ರತಿಯೊಬ್ಬನೂ ಆಲೋಚಿಸಬೇಕು. ಮುಂದೆ ಹೇಗೆ ಎನ್ನುವುದನ್ನೂ ಚಿಂತಿಸಬೇಕು.
- ಒಮ್ಮೆ ನಾನು ಬ್ಯಾಂಕಿನಿಂದ ಸಾಲ ಮಾಡಿದ್ದೆ. ಸಾಕೋ ಸಾಕಾಯಿತು. ಈಗ ಸಾಲವಿಲ್ಲದೆ ಸಂತೃಪ್ತ. ಸಾಲ ಮಾಡಿ ಕೃಷಿ ಬೇಡ. ಅದು ನೆಮ್ಮದಿಯನ್ನು ಹಾಳು ಮಾಡುತ್ತದೆ.
- ನಾನು ಈಗಲೂ ಭತ್ತದ ಕೃಷಿಯಲ್ಲಿ ವಿದ್ಯಾರ್ಥಿ.
- ಬಾಲ್ಯದಲ್ಲಿದ್ದಾಗ ಮನೆಯಲ್ಲಿ ತಯಾರಿಸಿದ ಅವಲಕ್ಕಿ, ಕೊಬ್ಬರಿ, ಬೆಲ್ಲ... ತಿಂದು ಬೆಳೆದ ದೇಹ. ನನ್ನ ಆರೋಗ್ಯ ಈಗಲೂ ಸದೃಢವಾಗಿದೆ.

ತೋಟಗಳು ವಿಸ್ತಾರವಾದುವು. ಆದರೆ ಈಗಲೂ ದೇವರಾಯರು ಸ್ಥಿತಪ್ರಜ್ಞರಾಗಿದ್ದರು.

ಎಲ್ಲ ಪಲ್ಲಟಗಳ ಮಧ್ಯೆ ತಾನು ಮಾಡುವ ಕೃಷಿಯ ಆಯ್ಕೆಯಲ್ಲಿ ಅವರು ಸ್ಥಿರತೆಯನ್ನು ಕಂಡಿದ್ದಾರೆ. ಆಗಲೇ ಫಸಲು ಕೊಡುತ್ತಿದ್ದ ಅಡಿಕೆ ತೋಟವನ್ನು ಆರೈಕೆ ಮಾಡುವುದು. ಅನ್ನದ ಬೆಳೆಯನ್ನು ಬೆಳೆಯುವುದು. ತಳಿಯ ಸಂರಕ್ಷಣೆಯ ಕಾರ್ಯವನ್ನು ವೇಗಗೊಳಿಸುವುದು. ಒಟ್ಟೂ ಪರಿಣಾಮಗಳನ್ನು ಆಗಾಗ್ಗೆ ಹೇಳುತ್ತಿರುವ ಅವರ ಮಾತುಗಳು ಸಾಕ್ಷೀಕರಿಸುತ್ತದೆ – 'ನನ್ನದು ನೆಮ್ಮದಿಯ ಜೀವನ. ನಾನೀಗ ಐಶ್ವರ್ಯವಂತ, ವರ್ಷವಿಡೀ ಉಣ್ಣಲು ಅಕ್ಕಿಯಿದೆ.'

ಇವರು ಉಣ್ಣುವುದಕ್ಕೆ ಯಾವುದಾದರೂ ಒಂದು ತಳಿಯನ್ನು ಬೆಳೆದರೆ ಸಾಕಿತ್ತು. ಇವರದು ಮಾತ್ರ ಭಿನ್ನ ಹಾದಿಯತ್ತ ಪಯಣ. ಅಜ್ಞಾತವಾಗುತ್ತಿರುವ, ನಾಶದಂಚಿನಲ್ಲಿರುವ ಭತ್ತದ ತಳಿಗಳನ್ನು ಸಂರಕ್ಷಿಸಬೇಕೆನ್ನುವ ಸಂಕಲ್ಪ. ಈಗವರಲ್ಲಿ ನೂರ ಎಪ್ಪತ್ತಕ್ಕೂ ಹೆಚ್ಚಿನ ಭತ್ತದ ತಳಿಗಳ ಸಂಗ್ರಹವಿದೆ. ಪ್ರತಿ ವರುಷವೂ ಬಿತ್ತಿ, ಆರೈಕೆ ಮಾಡಿ ಬೆಳೆದು ಕಾಪಿಡುತ್ತಿದ್ದಾರೆ. ಒಂದೊಂದು ತಳಿಯನ್ನು ಬೆಳೆಯುವುದೇ ತ್ರಾಸವಾಗಿರುವ ಸ್ಥಿತಿಯಲ್ಲಿ ಇಷ್ಟೂ ತಳಿಗಳ ಸಹವಾಸ ಒಂದು ತಪಸ್ಸು. ಅವರನ್ನು 'ತಳಿ ತಾಪಸಿ' ಎನ್ನುವುದೇ ಸರಿ.

ಹಿಂದೆ ಹದಿನೈದು ಎಕರೆಯಲ್ಲಿ ತಳಿಗಳನ್ನು ಬೆಳೆಸುತ್ತಿದ್ದರು. ನಿರ್ವಹಣಾ ಸಮಸ್ಯೆಗಳಿಂದಾಗಿ ಈಗದು ಐದೆಕರೆಗೆ ಇಳಿಸಿದ್ದಾರೆ. ಒಮ್ಮೆ ಬೆಳೆದು ಬೀಜವನ್ನು ಕಾಪಿಟ್ಟರೆ ಸಾಲದು, ಪ್ರತಿವರುಷವೂ ಬಿತ್ತಿ, ಆರೈಕೆ ಮಾಡಿ ಸಂರಕ್ಷಿಸಿಡಬೇಕು. ಹೆಚ್ಚು ಶ್ರಮ ಬೇಡುವ ಕೆಲಸವಾದರೂ ದೇವರಾಯರಿಗೆ ಸಂತೋಷವಿದೆ. ತಳಿಯನ್ನು ಅಭಿವೃದ್ಧಿ ಪಡಿಸುವ ತಳಿಪ್ರಿಯರಿಗೆ ಒಂದು ಹಿಡಿಯಷ್ಟು ಮಾತ್ರ ಬೀಜಗಳನ್ನು ನೀಡುತ್ತಾರೆ; ಬೆಳೆದು ಅಭಿವೃದ್ಧಿಪಡಿಸಿ ದುಪ್ಪಟ್ಟು ಮರಳಿಸುವ ಸಾತ್ವಿಕ ಷರತ್ತಿನೊಂದಿಗೆ!

ಬೀಜ ಸಂರಕ್ಷಣೆಗಾಗಿ ಬೆಳೆದ ಪೈರನ್ನು ಕೊಯಿದು, ಕಾಳುಗಳನ್ನು ಬೇರ್ಪಡಿಸಿ, ಸಂಸ್ಕರಿಸಿ, ಜತನದಿಂದ ಕಾಪಿಡುವುದು. ಇವಿಷ್ಟು ಕೆಲಸಗಳಿಗೆ ಸಹಾಯಕರಿಲ್ಲ. ಸ್ವತಃ ದೇವರಾಯರೇ ಮಾಡುತ್ತಾರೆ. ಮೊನ್ನೆ, ನವೆಂಬರ್‌ನಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಲು ಬೆಂಗಳೂರಿಗೆ ಹೋಗಿದ್ದರಷ್ಟೇ. 'ಛೆ... ಕೊಯಿಲು ಬಾಕಿಯಿದೆ. ಒಂದು ದಿವಸ ವ್ಯರ್ಥವಾಯಿತಲ್ಲ.' ಪ್ರಶಸ್ತಿಯ ಸಂತೋಷದ ಜತೆಜತೆಗೆ ಕೃಷಿ ಕೆಲಸ ಬಾಕಿಯಾಯಿತಲ್ಲ ಎಂಬ ಕೊರಗು.

### ಪ್ರಾದೇಶಿಕ ಸೊಗಸಿನ ತಳಿಗಳು

ಗಂಧಸಾಲೆ, ರಾಜಕಯಮೆ, ಮಸ್ಸೂರಿ, ಕಾಯಮೆ, ಅಲ್ಯಂಡೆ, ಕವಳಕಣ್ಣು, ಜೀರಿಗೆ ಸಣ್ಣ, ಹಲ್ಲಿಂಗ, ಕೊಳಕೆದೊಡ್ರ, ಮೊರಡ್ಡ, ಕಳಮೆ, ಬಾಸ್ಮತಿಗಿಡ್ಡ, ಬಾಸ್ಮತಿಉದ್ದ, ಮಸ್ಕತಿ, ಮೀಸೆಭತ್ತ, ಅಜಿಪ, ಪೀಟ್‌ಸಾಲೆ, ತೊನ್ನೂರು, ಕುಂದಪುಲ್ಲನ್, ಅದೇನ್‌ಕೇಳ್ತೆ, ಕರಿದಡಿ, ಗುಲ್ವಾಡಿ ಸಣ್ಣ, ಗಿಡ್ಡಭತ್ತ, ಮೈಸೂರುಮಲ್ಲಿಗೆ, ಬಿಳಿನೆಲ್ಲು, ಶಕ್ತಿ, ಕೆ.ಕೆ. ಪಿ.(ಮಹಾವೀರ), ಯಂ.ಒ.4 ಸುಗ್ಗಿಕಯಮೆ, ಕುಟ್ಟಿಕಯಮೆ, ಕರಿಯಜೇಬಿ, ಉಬರಮುಂಡ, ರಕ್ತದಂ, ರತ್ನಚೂಡಿ, ಅನ್ನಪೂರ್ಣ. ಜಯ, ಐ.ಆರ್.8, ಅತಿಕರಯ, ಅತಿಕಾಯ, ಚಾರೆ, ನಾಗಭತ್ತ, ಕಣ್ವ, ಕಾಮಧಾರಿ, ಕುಮೇರು ಮತ್ತು ಅಜ್ಜಿಗ.. ಇತ್ಯಾದಿ. ಇವೆಲ್ಲಾ ತಳಿಗಳ ಗುಣನಾಮಗಳು.

ಗದ್ದೆಯಲ್ಲಿ ಎಲ್ಲಿ, ಯಾವ ಜಾಗದಲ್ಲಿ, ಯಾವುದೆಲ್ಲಾ ತಳಿಗಳಿವೆ – ಹೇಳಲು ಪುಸ್ತಕ ಬೇಡ! ನೇಜಿ, ಪೈರನ್ನು ನೋಡಿಯೇ ಇಂತಹುದೇ ತಳಿ ಎಂದು ಗುರುತಿಸುವಷ್ಟು ಸೂಕ್ಷ್ಮತೆ. ಅವರ ಕಣ್ಣುತಪ್ಪಿ ಗದ್ದೆಯಲ್ಲಿ ಒಂದು ತಳಿಯೂ ಅಚೀಚೆಯಾಗದು. ಗದ್ದೆಯಲ್ಲಿ ಯಾವ ಜಾಗದಲ್ಲಿ ಯಾವ ತಳಿ ಇದೆ ಎನ್ನುವ ನೆನಪು ಕಂಪ್ಯೂಟರ್‌ಗಿಂತಲೂ ಕ್ಷಿಪ್ರ.